ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001.**

**ಸಂಖ್ಯೆ: ಇ-ಆಡಳಿತ/ ಶಿ.ಪ್ರಾ.ಸೇ.ಮಾ:01/2019-20** **ದಿನಾಂಕ:19-02-2020**

**-: ಸುತ್ತೋಲೆ :-**

ವಿಷಯ:- ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಪ್ರಾಥಮಿಕ ಸೇವಾ ಮಾಹಿತಿ ಪರಿಶೀಲಿಸುವ ಬಗ್ಗೆ.

ಉಲ್ಲೇಖ:-1) ಈ ಕಛೇರಿಯ ಸುತ್ತೋಲೆ ಸಂಖ್ಯೆ:- ಇ-ಆಡಳಿತ/ ಶಿ.ಪ್ರಾ.ಸೇ.ಮಾ:01/2019-20, ದಿನಾಂಕ:-05-02-2020

2) ದಿನಾಂಕ:-17-02-2020 ರಂದು ನಡೆದ ಟೆಲಿಕಾನ್ಫರೆನ್ಸ್ ನಲ್ಲಿ ನೀಡಿದ ಸೂಚನೆಗಳು

---

ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಸಾರ್ವಜನಿಕ ಶಿಕ್ಷಣ ಇಲಾಖೆ ವ್ಯಾಪ್ತಿಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಹಾಗೂ ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರು ಹಾಗೂ ತತ್ಸಮಾನ ವೃಂದದ ಶಿಕ್ಷಕರ ಪ್ರಾಥಮಿಕ ಮಾಹಿತಿಯನ್ನು ಶಿಕ್ಷಕರ ಸೇವಾವಹಿಯಲ್ಲಿರುವಂತೆ ಪರಿಶೀಲಿಸಿ ದೃಢೀಕರಿಸಲು EMPLOYEE VALIDATION MODULE ಅನ್ನು ಬಿಡುಗಡೆ ಮಾಡಿದ್ದು, ಡಿಡಿಓಗಳ ಹಂತದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿಸಲಾಗಿದೆ.

ಶಿಕ್ಷಕರ ಸೇವಾಮಾಹಿತಿ ಪರಿಶೀಲನೆ ಕಾರ್ಯಕ್ಕೆ ಈ ಕೆಳಕಂಡಂತೆ ಕಾಲಮಿತಿಯನ್ನು ನಿಗದಿಪಡಿಸಲಾಗಿದ್ದು, ಎಲ್ಲಾ ಡಿಡಿಓಗಳು ತಂತ್ರಾಂಶದ ಮೂಲಕ ತಮ್ಮ ಕಛೇರಿ ವ್ಯಾಪ್ತಿಯ ಶಿಕ್ಷಕರ ಮಾಹಿತಿ ಪರಿಶೀಲನಾ ಕಾರ್ಯವನ್ನು ಪೂರ್ಣಗೊಳಿಸಲು ಸೂಕ್ತ ಕ್ರಮವಹಿಸಲು ಸೂಚಿಸಿದೆ.

| ಕ್ರ.ಸಂ. | ಭಾಗೀದಾರರು | ಕಾರ್ಯದ ವಿವರ | ನಿಗದಿಪಡಿಸಿದ ಕೊನೆಯ ದಿನಾಂಕ |
|---|---|---|---|
| 1 | ವಿಷಯ ನಿರ್ವಾಹಕರು | ಸೇವಾವಹಿಯ ಭಾಗ-1 ಸ್ಕ್ಯಾನ್ ಮಾಡಿ ತಂತ್ರಾಂಶದಲ್ಲಿ ಅಪ್ ಲೋಡ್ ಮಾಡುವುದು | **ದಿನಾಂಕ:-02-03-2020** |
| 2 | ಪ್ರೌಢಶಾಲಾ ವಿಷಯ ನಿರ್ವಾಹಕರು/ ಇತರೆ ಕಛೇರಿಗಳ ಅಧೀಕ್ಷಕರು | ಶಿಕ್ಷಕರ ಪ್ರಾಥಮಿಕ ಮಾಹಿತಿ ಪರಿಶೀಲನೆ | **ದಿನಾಂಕ:-10-03-2020** |
| 3 | ಡಿಡಿಓ ಗಳು | ಶಿಕ್ಷಕರ ಪ್ರಾಥಮಿಕ ಮಾಹಿತಿ ಅನುಮೋದನೆ | **ದಿನಾಂಕ:-20-03-2020** |

ಪ್ರತಿ ಹಂತದ ಭಾಗೀದಾರರು ತಮಗೆ ನಿಗದಿ ಪಡಿಸಿದ ಅಂತಿಮ ದಿನಾಂಕದವರೆಗೂ ಕಾಯದೇ ನಿರಂತರವಾಗಿ ತಮ್ಮ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಿ ಪರಿಶೀಲನಾ ಕಾರ್ಯವನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸೂಕ್ತ ಕ್ರಮ ವಹಿಸುವುದು.

ಪ್ರೌಢಶಾಲಾ ಮುಖ್ಯಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳ ಸೇವಾವಹಿಯು ಆಯಾ ಕಛೇರಿಗಳಲ್ಲಿ ನಿರ್ವಹಿಸದಿರುವುದರಿಂದ ಪ್ರಾಥಮಿಕ ಮಾಹಿತಿ ಪರಿಶೀಲನೆ ತಂತ್ರಾಂಶದಲ್ಲಿ ಸೇವಾವಹಿಯ ಭಾಗ-1 ರ ಬದಲು ನೇಮಕಾತಿ ಆದೇಶವನ್ನು ಅಪ್ ಲೋಡ್ ಮಾಡಲು ತಿಳಿಸಿದೆ.

ತಮ್ಮ ಕಛೇರಿ ವ್ಯಾಪ್ತಿಯ ಶಿಕ್ಷಕರ ಮಾಹಿತಿ ಪರಿಶೀಲನೆಗೆ ಲಭ್ಯವಿಲ್ಲದಿದ್ದಲ್ಲಿ ಸಂಬಂಧಿಸಿದ ಡಿಡಿಓ ಗಳು ಅಂತಹ ಶಿಕ್ಷಕರ ಕೆ.ಜಿ.ಐ.ಡಿ. ಸಂಖ್ಯೆ, ಹೆಸರು, ಶಾಲೆ/ಕಛೇರಿಯ ವಿವರದ ಮಾಹಿತಿಯನ್ನು sadpiegov1@gmail.com ಇ-ಮೇಲ್ ಕಳುಹಿಸುವುದು. EMPLOYEE VALIDATION MODULE ಗೆ ಸಂಬಂಧಪಟ್ಟಂತೆ ಈ ಸುತ್ತೋಲೆಯೊಂದಿಗೆ ನೀಡಿರುವ ಕೈಪಿಡಿಯನ್ನು ಅನುಸರಿಸುವುದು ಹಾಗೂ ಯಾವುದೇ ತಾಂತ್ರಿಕ ಸಮಸ್ಯೆಗಳಿಗೆ ವಿವರ ಸಹಿತ satsesrhelp@gmail.com ಇ-ಮೇಲ್ ಕಳುಹಿಸುವುದು.

ಮಾಹಿತಿ ಅಳವಡಿಕೆ ಮತ್ತು ಪರಿಶೀಲನೆಗೆ ಸಂಬಂಧಿಸಿದಂತೆ ಯಾವುದೇ ಗೊಂದಲಗಳಿದ್ದಲ್ಲಿ ಬೆಂಗಳೂರು, ಮೈಸೂರು ವಿಭಾಗದವರು ಶ್ರೀಮತಿ ಶುಭಮಂಗಳ ಆರ್.ವಿ., ಹಿರಿಯ ಸಹಾಯಕ ನಿರ್ದೇಶಕರು(ಇ-ಆಡಳಿತ ವಿಭಾಗ) (ಮೊಬೈಲ್ ಸಂಖ್ಯೆ-9008178321) ಇವರನ್ನು, ಬೆಳಗಾವಿ ವಿಭಾಗದವರು ಶ್ರೀ ಪುರುಷೋತ್ತಮಕುಮಾರ್ , ಹಿರಿಯ ಸಹಾಯಕ ನಿರ್ದೇಶಕರು(ಎಸ್.ಎ.ಟಿ.ಎಸ್.) (ಮೊಬೈಲ್ ಸಂಖ್ಯೆ-9448999468) ಇವರನ್ನು ಮತ್ತು ಕಲ್ಬುರ್ಗಿ ವಿಭಾಗದವರು ಶ್ರೀಮತಿ ಮಂಗಳ ಜಿ., ಹಿರಿಯ ಸಹಾಯಕ ನಿರ್ದೇಶಕರು (ಮೊಬೈಲ್ ಸಂಖ್ಯೆ-8549034144) ಇವರನ್ನು ಸಂಪರ್ಕಿಸಲು ತಿಳಿಸಿದೆ.

24/12/20

**(ಡಾ.ಕೆ.ಜಿ.ಜಗದೀಶ, ಭಾ.ಆ.ಸೇ.)**

**ಆಯುಕ್ತರು**

**ಪ್ರತಿಯನ್ನು**

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
2. ಅಪರ ಆಯುಕ್ತರು, ಧಾರವಾಡ ಮತ್ತು ಕಲ್ಬುರ್ಗಿ ಆಯುಕ್ತಾಲಯ, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
3. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) , ಬೆಂಗಳೂರು. ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
4. ನಿರ್ದೇಶಕರು (ಪ್ರೌಢ ಶಿಕ್ಷಣ) , ಬೆಂಗಳೂರು. ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
5. ನಿರ್ದೇಶಕರು ,ಡಿ.ಎಸ್.ಇ.ಆರ್.ಟಿ., ಬೆಂಗಳೂರು. ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
6. ನಿರ್ದೇಶಕರು, ಭಾಷಾ ಅಲ್ಪಸಂಖ್ಯಾತ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು. ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
7. ನಿರ್ದೇಶಕರು, ಕ.ಪ್ರೌ.ಶಿ.ಪ.ಮಂಡಳಿ , ಬೆಂಗಳೂರು. ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
8. ವ್ಯವಸ್ಥಾಪಕ ನಿರ್ದೇಶಕರು, ಕ.ಪ.ಪು.ಸಂಘ, ಬೆಂಗಳೂರು. ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
9. ನಿರ್ದೇಶಕರು, ಸಿಸ್ಲೆಪ್, ಧಾರವಾಡ, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
10. ವಿಭಾಗೀಯ ಸಹನಿರ್ದೇಶಕರು , ಬೆಂಗಳೂರು/ಮೈಸೂರು/ಬೆಳಗಾವಿ/ಕಲ್ಬುರ್ಗಿ ವಿಭಾಗ ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
11. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು. ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
12. ಪ್ರಾಂಶುಪಾಲರು, ರಾಜ್ಯದ ಎಲ್ಲಾ ಸಿ.ಟಿ.ಇ. ಗಳು. ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
13 .ಉಪನಿರ್ದೇಶಕರು, ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು. ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
14 .ಉಪನಿರ್ದೇಶಕರು (ಆಡಳಿತ), ಬೆಂಗಳೂರು/ಮೈಸೂರು/ಬೆಳಗಾವಿ/ಕಲ್ಬುರ್ಗಿ ವಿಭಾಗದ ಎಲ್ಲಾ ಜಿಲ್ಲೆಗಳು, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ

15 .ಉಪನಿರ್ದೇಶಕರು (ಅಭಿವೃದ್ಧಿ) , ಬೆಂಗಳೂರು/ಮೈಸೂರು/ಬೆಳಗಾವಿ/ಕಲ್ಬುರ್ಗಿ ವಿಭಾಗದ ಎಲ್ಲಾ ಜಿಲ್ಲೆಗಳು, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ

16 .ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ

17 .ರಾಜ್ಯದ ಎಲ್ಲಾ  ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ ಸೂಕ್ತ ಕ್ರಮಕ್ಕಾಗಿ - ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರ ಮೂಲಕ

18. ಕಛೇರಿ ಪ್ರತಿ